ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿ ಮತ ಕ್ಷೇತ್ರಗಳು

೮೮೪ (೧೩೧೭) ಶ್ರೀ ಎಂ. ಮಹದೇವ್ (ನಂಜನಗೂಡು).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್, ವಾರ್ತಾ ಮತ್ತು ಪ್ರಚಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿ ಮತ ಕ್ಷೇತ್ರಗಳ ರಚನೆಯಲ್ಲಿ ತಾರತಮ್ಯ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಮುಂಬರುವ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿ ಚುನಾವಣೆಯೊಳಗೆ ಇವುಗಳನ್ನು ಪುನರ್ ರಚಿಸಲು ಸರ್ಕಾರವು ಆಲೋಚಿಸಿದೆಯೇ ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್, ವಾರ್ತಾ ಮತ್ತು ಪ್ರಚಾರ ಸಚಿವರು).—

ಅ) ಬಂದಿದೆ.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಮುಲ್ಕಿ ಸಮುದಾಯ ಆಸ್ಪತ್ರೆಯಲ್ಲಿ ಖಾಲಿ ಇರುವ ನೌಕರರ ಹುದ್ದೆಗಳು

೮೮೫ (೧೫೩೮) ಶ್ರೀ ಸೋಮಪ್ಪ ಸುವರ್ಣ (ಮೂಡಬಿದ್ರೆ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಮುಲ್ಕಿ ಆಸ್ಪತ್ರೆಯನ್ನು ಸಮುದಾಯ ಆಸ್ಪತ್ರೆಯನ್ನಾಗಿ ಅಭಿವೃದ್ಧಿಪಡಿಸಿದ ಬಳಿಕ ಈಗ ಆಸ್ಪತ್ರೆಯಲ್ಲಿ ಯಾವ ಯಾವ ವಿಭಾಗದಲ್ಲಿ ಎಷ್ಟು ಎಷ್ಟು ನೌಕರರ ಹುದ್ದೆಗಳು ಖಾಲಿಯಾಗಿ ಉಳಿದಿವೆ ?

ಆ) ಈ ಹೊಸ ಯೋಜನೆಯಂತೆ ಯಾವ ಯಾವ ಉಪಕರಣ ಹಾಗೂ ಸಲಕರಣೆ ಮಂಜೂರಾಗಿದ್ದು ಇಷ್ಟರ ತನಕ ಯಾವುದೆಲ್ಲಾ ಸರಬರಾಜು ಮಾಡಲಾಗಿದೆ ?

ಇ) ಸಿಬ್ಬಂದಿಗಳ ನೇಮಕ ಯಾವಾಗ ಪೂರಕಗೊಳ್ಳಲಿರುವುದು ?

ಈ) ಈ ತನಕ ಸರಬರಾಜು ಆಗದಿರುವ ಉಪಕರಣಗಳ ಪೂರೈಕೆ ಯಾವಾಗ ಪೂರ್ಣಗೊಳ್ಳಬಹುದು ?

ಉ) ಈ ಆಸ್ಪತ್ರೆಯ ರಸ್ತೆಯು ಜನ ಸಂಚಾರಕ್ಕೆ ಯೋಗ್ಯವಾಗಿಲ್ಲವಾದ್ದರಿಂದ ಇದನ್ನು ಯಾವಾಗ ಅಭಿವೃದ್ಧಿಪಡಿಸಲಾಗುವುದು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು)

ಅ) ೧) ಸಹಾಯಕ ಶಸ್ತ್ರ ಚಿಕಿತ್ಸಕ — ೧
೨) ಸಹಾಯಕ ದಂತ ಶಸ್ತ್ರ ಚಿಕಿತ್ಸಕ — ೧
೩) ಕ್ಷ-ಕಿರಣ ತಂತ್ರಜ್ಞ — ೧
೪) ಕ್ಷ-ಕಿರಣ ಸಹಾಯಕ — ೧
೫) ಕಿರಿಯ ಪ್ರಯೋಗಾಲಾ ತಂತ್ರಜ್ಞ — ೧
೬) ಪ್ರಯೋಗ ಶಾಲಾ ಸಹಾಯಕರು — ೧
೭) ಅಡುಗೆಯವರು — ೧
೮) ಪ್ರಥಮ ದರ್ಜೆ ಸಹಾಯಕ — ೧